ಕರ್ನಾಟಕ ಸರಕಾರ

ಪದವಿ ಪೂರ್ವ ಶಿಕ್ಷಣ ಇಲಾಖೆ

ಸಂಖ್ಯೆ:ಪಪೂಶಿ/ಎಸ್ಎಸ್/ಉನಿ/ಮಾಹಿತಿ/20-21

ಉಪನಿರ್ದೇಶಕರ ಕಛೇರಿ
ಪದವಿ ಪೂರ್ವ ಶಿಕ್ಷಣ ಇಲಾಖೆ
ದ.ಕ ಜಿಲ್ಲೆ, ಮಂಗಳೂರು
ದಿನಾಂಕ:03-07-2020

ಅತೀ ಜರೂರು

ಸುತ್ತೋಲೆ

ವಿಷಯ: ಖಾಸಗಿ ಪದವಿ ಪೂರ್ವ ಕಾಲೇಜುಗಳಲ್ಲಿ ಕಾಲೇಜು ಮಂಜೂರಾಗಿ ಪ್ರಾರಂಭಗೊಂಡ ಸಾಲಿನಿಂದ 2019-20ನೇ ಶೈಕ್ಷಣಿಕ ಸಾಲಿನವರೆಗೆ ಕಾಲೇಜುಗಳಿಗೆ ಅನುಮತಿ ನೀಡಿರುವ ಭಾಷೆ, ಹೆಚ್ಚುವರಿ ವಿಷಯ ಹಾಗೂ ಹೆಚ್ಚುವರಿ ಸಂಯೋಜನೆಗಳ ಮಾಹಿತಿ ಒದಗಿಸುವ ಕುರಿತು.

ಉಲ್ಲೇಖ: ಮಾನ್ಯ ನಿರ್ದೇಶಕರು ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಸುತ್ತೋಲೆ ಸಂಖ್ಯೆ: ಪಪೂಶಿ/ಸಿಬ್ಬಂದಿ-3/ಪಾಲಿಸಿ/ಇತರೆ/2020-21 ದಿನಾಂಕ: 29-07-2020

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಸರಕಾರವು ಪದವಿ ಪೂರ್ವ ಮಂಡಳಿ/ಇಲಾಖೆಯನ್ನು 1970ರಲ್ಲಿ ಸ್ಥಾಪಿಸಿದ್ದು 1971-72ನೇ ಶೈಕ್ಷಣಿಕ ಸಾಲಿನಿಂದ ರಾಜ್ಯದಲ್ಲಿ +1, +2 ಹಂತಗಳ ಪದವಿ ಪೂರ್ವ ಶಿಕ್ಷಣವನ್ನು ಪ್ರಾರಂಭಿಸಲು ಸರಕಾರದ ಆದೇಶದ ಸಂಖ್ಯೆ: ಇಡಿ 29 ಯು.ಡಿ.ಸಿ 71 ದಿನಾಂಕ: 28-04-1971ರಲ್ಲಿ ಮಂಜೂರಾತಿ ನೀಡಿರುತ್ತದೆ. ಮುಂದುವರೆದು ಪದವಿ ಮತ್ತು ವಿಶ್ವವಿದ್ಯಾಲಯಗಳಲ್ಲಿ ಪದವಿ ಪೂರ್ವ ತರಗತಿಗಳನ್ನು ನಡೆಸಲು ಮಂಜೂರಾತಿ ನೀಡಿರುತ್ತದೆ.

1971-72ನೇ ಸಾಲಿನಿಂದ ಪ್ರಾರಂಭಿಸಿದ ಖಾಸಗಿ ಪದವಿ ಪೂರ್ವ ಕಾಲೇಜುಗಳು ಹಾಗೂ ಪದವಿಯಿಂದ ಬೇರ್ಪಟ್ಟ ಪದವಿ ಪೂರ್ವ ಕಾಲೇಜುಗಳಲ್ಲಿ ಪ್ರಾರಂಭದಿಂದ 2019-20ನೇ ಶೈಕ್ಷಣಿಕ ಸಾಲಿನವರೆಗೆ ಸರ್ಕಾರ/ಇಲಾಖೆಯಿಂದ ಬೋಧಿಸಲು ಭಾಗ-1ರಲ್ಲಿ ಅನುಮತಿ ನೀಡಿರುವ ಭಾಷೆ, ಭಾಗ-2ರಲ್ಲಿ ಅನುಮತಿಸಿರುವ ಐಚ್ಛಿಕ ವಿಷಯ/ಸಂಯೋಜನೆ/ಹೆಚ್ಚುವರಿ ಭಾಷೆ/ಹೆಚ್ಚುವರಿ ಸಂಯೋಜನೆ/ಹೆಚ್ಚುವರಿ ವಿಷಯದ ಬಗೆಗಿನ ಮಾಹಿತಿಯನ್ನು ಯಾವುದೇ ಬದಲಾವಣೆ ಮಾಡದೇ ಇಲಾಖೆ ನೀಡಿರುವ ನಮೂನೆಯಲ್ಲಿಯೇ ಹಾಗೂ ನುಡಿ01 (Nudi 01e) ಫಾಂಟ್‌ನಲ್ಲಿಯೇ ಸಾಫ್ಟ್ ಕಾಪಿಯನ್ನು ddpuemangaluru@gmail.comಗೆ ಹಾಗೂ ಹಾರ್ಡ್ ಕಾಪಿಯನ್ನು ಈ ಕಛೇರಿಗೆ ದಿನಾಂಕ: 08-08-2020 ರೊಳಗೆ ಸಲ್ಲಿಸುವಂತೆ ಸೂಚಿಸಿದೆ.

ಉಪನಿರ್ದೇಶಕರು
ಉಪ ನಿರ್ದೇಶಕರು
ಪದವಿಪೂರ್ವ ಶಿಕ್ಷಣ ಇಲಾಖೆ, ದ.ಕ.ಜಿಲ್ಲೆ
ರಥಬೀದಿ, ಮಂಗಳೂರು-575001